ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1506**
ಸದಸ್ಯರ ಹೆಸರು	:	ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	18.03.2021
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

*****

	ಪ್ರಶ್ನೆ	ಉತ್ತರ
ಅ)	ರಾಯಚೂರು ಆರ್.ಟಿ.ಪಿ.ಎಸ್. ನಲ್ಲಿ ಪ್ರತಿ ವರ್ಷ ತಾಂತ್ರಿಕ ತೊಂದರೆಯಿಂದಾಗಿ ವಿದ್ಯುತ್ ಉತ್ಪಾದನೆ ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2015-16 ಹಾಗೂ 2016-17 ರಲ್ಲಿ ನೈಜ ಉತ್ಪಾದನೆಯು ಕೇಂದ್ರ ವಿದ್ಯುತ್ ಪ್ರಾಧಿಕಾರ ನಿಗದಿಪಡಿಸಿದ ವಿದ್ಯುತ್ ಉತ್ಪಾದನೆಗಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. 2017-18, 2018-19 ಮತ್ತು 2019-20 ರಲ್ಲಿ ನೈಜ ವಿದ್ಯುತ್ ಉತ್ಪಾದನೆಯು ಕೇಂದ್ರ ವಿದ್ಯುತ್ ಪ್ರಾಧಿಕಾರ ನಿಗದಿಪಡಿಸಿದ ವಿದ್ಯುತ್ ಉತ್ಪಾದನ ನೋ ಲೋಡ್ ಡಿಮ್ಯಾಂಡ್‌ನಿಂದಾಗಿ ಸ್ವಲ್ಪ ಕುಂಠಿತವಾಗಿದೆ.
ಆ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ನಿಷ್ಕಾಳಜಿ ತೋರಿಸುತ್ತಿರುವುದಕ್ಕೆ ಕಾರಣಗಳೇನು ಮತ್ತು ವಿದ್ಯುತ್ ಉತ್ಪಾದನೆ ಕುಂಠಿತಗೊಳ್ಳದಂತೆ ಸರ್ಕಾರ ಕೈಗೊಂಡ ಕ್ರಮವೇನು?	ಪ್ರಸ್ತುತ ನಿಯಮಗಳಂತೆ ವಿದ್ಯುತ್ ಉತ್ಪಾದನಾ ಘಟಕಗಳನ್ನು ಚಾಲನೆಗೊಳಿಸುವ ಹಾಗೂ ಸ್ಥಗಿತಗೊಳಿಸುವ ನಿರ್ಧಾರವನ್ನು ಮೆರಿಟ್ ಆರ್ಡರ್ ಡಿಸ್ಪ್ಯಾಚ್ (ಎಂ.ಒ.ಡಿ) ಆಧಾರದ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ಎಂಒಡಿ ಪಟ್ಟಿಯ ತಯಾರಿಕೆಯಲ್ಲಿ ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳ ಮಾದರಿಯಂತೆ ಕರ್ನಾಟಕ ಎಂಒಡಿ ಪಟ್ಟಿಯ ತಯಾರಿಕೆಯ ವಿಧಾನದಲ್ಲಿ ಪರಿಷ್ಕರಿಸಲು ನಿಯಮಾವಳಿಯನ್ನು ನೀಡುವಂತೆ KERC ಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಅಹವಾಲನ್ನು ಸಲ್ಲಿಸಲಾಗಿದೆ. ಪ್ರಸ್ತುತ ಘಟಕ-8 ರ ಜನರೇಟರ್ ನ ದುರಸ್ತಿ ಕಾರ್ಯವು ಪ್ರಗತಿಯಲ್ಲಿದ್ದು, ಮಾರ್ಚ್ 2021 ರ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಅಲ್ಲದೇ, ಘಟಕಗಳಲ್ಲಿ ಕಾಣಿಸಿಕೊಳ್ಳುವ ಬಾಯ್ಲರ್ ಟ್ಯೂಬ್ ಲೀಕೆಜ್‌ಗಳ ದುರಸ್ತಿ ಕಾರ್ಯವನ್ನು ಕೂಡಲೇ ಕೈಗೊಂಡು ಘಟಕಗಳನ್ನು ವಿದ್ಯುತ್ ಉತ್ಪಾದನೆಗೆ ಸಜ್ಜುಗೊಳಿಸಲಾಗುತ್ತಿದೆ. ಅಲ್ಲದೇ, ಅವಶ್ಯಕತೆಗನುಗುಣವಾಗಿ 2017-18 ರಲ್ಲಿ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ 1 ಮತ್ತು 2 ರ ನವೀಕರಣ ಮತ್ತು ಆಧುನೀಕರಣವನ್ನು ಕೈಗೊಳ್ಳಲಾಗಿದೆ ಹಾಗೂ ಘಟಕ 3 ರ ನವೀಕರಣ ಮತ್ತು ಆಧುನೀಕರಣವನ್ನು 2021-22 ರಲ್ಲಿ ಪ್ರಸ್ತಾಪಿಸಲಾಗಿದೆ.

ಸಂಖ್ಯೆ: ಎನರ್ಜಿ 86 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ